(6ನೇ ಪುಟದಿಂದ)
ಕಪ್ಪು ಚಿತ್ತಾರವಿರುವ ಫಾರೆಸ್ಟ್ ಪಿರೆಟ್, ಇಂಡಿಯನ್ ಕಾಮನ್ ಪಿರೆಟ್, ಕೆಂಪು ಪಟ್ಟಿಯ ರೆಡ್ ಪಿರೆಟ್, ಸಣ್ಣ ಬಾಲದ ಕಾಮನ್ ಪಿರೆಟ್, ಬ್ಲೂ ಪಿರೆಟ್, ಅರೆವೃತ್ತಾಕಾರದ ಹಿಂದಿನ ರೆಕ್ಕೆಯ ಮತ್ತು ಒಂದಕ್ಕಿಂತ ಹೆಚ್ಚು ಬಾಲವಿರುವ ಗ್ರೀನ್ ಹೇರ್ ಸ್ಟ್ರೀಕ್, ಸಿಲ್ವರ್ ಹೇರ್ ಸ್ಟ್ರೀಕ್, ದಟ್ಟ ಮತ್ತು ಉಜ್ವಲ ನೀಲವರ್ಣದ ಬ್ಲೂ ಜೆಮ್, ಕಾಮನ್ ಜೆಮ್, ಹೊಳೆಯುವ ಬಿಳಿ ಬಣ್ಣದ ರೆಕ್ಕೆಯ ಆಂಗಲ್ಡ್ ಸನ್ ಬೀಮ್, ಸನ್‌ಬೀಮ್... ಹೀಗೆ ನೂರಾರು.

## ಕುಪಿಡ್ ಚಿಟ್ಟೆಗಳು

ಬ್ಲೂಸ್ ಎಂಬುದು ಸಣ್ಣ ಚಿಟ್ಟೆಗಳ ವರ್ಗವಾದರೆ, ಸಣ್ಣ ಚಿಟ್ಟೆಗಳಲ್ಲೆ ಅತೀ ಸಣ್ಣ ಚಿಕಣಿ ಚಿಟ್ಟೆಗಳು ಕುಪಿಡ್ ವರ್ಗದಲ್ಲಿ ಬರುತ್ತವೆ. ಸುಮಾರು ಹದಿನೈದು ಮಿಲಿಮೀಟರ್ ಅಳತೆಯಿಂದ ಇಪ್ಪತ್ತೈದು ಮಿಲಿಮೀಟರ್ ಅಳತೆಯಷ್ಟು ಚಿಕ್ಕ ಚಿಟ್ಟೆಗಳಿವು! ರೆಡ್ ಕುಪಿಡ್, ಲೈಮ್ ಬ್ಲೂ, ಟೈಲ್ಡ್ ಕುಪಿಡ್, ಚಾಪ್‌ಮನ್ ಕುಪಿಡ್, ಇಂಡಿಯನ್ ವೈಟ್ ಕುಪಿಡ್, ಸ್ಮಾಲ್ ಕುಪಿಡ್ ಮೊದಲಾದುವು ಈ ವರ್ಗದವು. ಅತೀ ಶೀತ ವಲಯವನ್ನು ಬಿಟ್ಟು ಉಳಿದಂತೆ ಪ್ರಪಂಚದ ಎಲ್ಲಾ ಕಡೆ ಹರಡಿರುವ ಇವು ತೀರಾ ಅಪರೂಪದ ಚಿಟ್ಟೆಗಳೇನಲ್ಲ. ಹಸಿರು ಸಸ್ಯವರ್ಗ ಇರುವಲ್ಲೆಲ್ಲ ಇರುತ್ತವಾದರೂ ತಮ್ಮ ಅತೀ ಚಿಕ್ಕ ಆಕಾರ ಮತ್ತು ಇದ್ದಲ್ಲಿ ಇರದ ಅತೀ ಚಟುವಟಿಕೆಯ ಕಾರಣ ಹುಡುಕಿ ತೆಗೆಯದಿದ್ದರೆ ಕಾಣಿಸಿಕೊಳ್ಳುವುದೇ ಇಲ್ಲ. ಈ ವರ್ಗದಲ್ಲೆ ಅತೀ ಚಿಕ್ಕ ಚಿಕಣಿ ಚಿಟ್ಟೆ ಇದ್ದು ಗ್ರಾಸ್ ಬ್ಲೂ ಎಂದು ಕರೆಸಿಕೊಳ್ಳುವ ಇದು ಕೇವಲ ಹತ್ತು ಮಿಲಿಮೀಟರ್ ಅಗಲವಾಗಿರುತ್ತದಂತೆ!

ಕುಪಿಡ್ ವರ್ಗಕ್ಕೆ ಸೇರದ, ಆದರೆ ಕುಪಿಡ್‌ನಂತೆಯೆ ಚಿಕ್ಕ ಆಕಾರದ ಇಪ್ಪತ್ತರಿಂದ ಮುವ್ವತ್ತು ಮಿಲಿಮೀಟರ್ ಅಳತೆಯ ಹಿಲ್ ಬ್ಲೂ, ವೈಟ್ ಬ್ಲೂ, ಹೆಡ್ಜ್ ಬ್ಲೂ, ಗ್ರಾಮ್ ಬ್ಲೂ, ವೈಟ್ ಡಿಸ್ಕ್ ಬ್ಲೂ, ಮತ್ತು ಹಸಿರು ಬಣ್ಣದ ಸಣ್ಣ ಚಿಟ್ಟೆಯಾದ ಇಂಡಿಯನ್ ಕಾಮನ್ ಗ್ರೀನ್ ಕೂಡಾ ಚಂದದ ಚಿಕಣಿ ಚಿಟ್ಟೆಗಳೇ.

## ಕ್ಯಾಮೆರಾದಲ್ಲಿ...

ಸೂರ್ಯೋದಯದ ನಂತರದ ಒಂದೆರಡು ಘಂಟೆ ಚಿಟ್ಟೆಗಳ ಛಾಯಾಗ್ರಹಣಕ್ಕೆ ಉತ್ತಮ ಸಮಯ. ಒಂದೊಮ್ಮೆ ಬಿಸಿಲು ಮೇಲೇರಿ ಚುರುಕಾದರೆ ಸಾಕಷ್ಟು ಉಷ್ಣಾಂಶವನ್ನು ಸಂಗ್ರಹಿಸಿಕೊಳ್ಳುವ ಚಿಟ್ಟೆಗಳು ಅತಿ ಚಟುವಟಿಕೆ ಪ್ರದರ್ಶಿಸುವುದರಿಂದ ಕುಳಿತಲ್ಲಿ ಕುಳಿತುಕೊಳ್ಳದೆ ಚಂಚಲವಾಗಿರುತ್ತವೆ. ಬೆಳಗಿನ ಸೂರ್ಯಸ್ನಾನಕ್ಕೆ ಸಜ್ಜಾಗಿ ರೆಕ್ಕೆ ಅರಳಿಸಿ ಸುಮ್ಮನೆ ಕುಳಿತುಕೊಳ್ಳುವ ಚಿಟ್ಟೆಗಳ ಫೋಟೋ ತೆಗೆಯುವುದು ಸಹಜವಾಗಿಯೆ ಸರಳ. ಹಾಗೆ ಮಕರಂದ ಹೀರಲು ಕುಳಿತುಕೊಳ್ಳುವ ಚಿಟ್ಟೆಗಳು ಛಾಯಾಗ್ರಾಹಕರಿಗೆ ಒಂದಷ್ಟು ಸಮಯಾವಕಾಶ ನೀಡುತ್ತವೆ. ಮಳೆಗೆ ಸಿಕ್ಕ ಚಿಟ್ಟೆ ಸಹಾ ಬಿಸಿಲಿಗಾಗಿ ಕಾಯುವುದರಿಂದ ಸ್ತಬ್ದವಾಗಿ ಕುಳಿತಿರುತ್ತದೆ. ಹಲವಾರು ಜಾತಿಯ ಚಿಟ್ಟೆಗಳು ಒಟ್ಟಾಗಿ ಕೆಸರಿನ ಮೇಲೆ ಕುಳಿತು ಲವಣಾಂಶವನ್ನು ಹೀರುವ (ಮಡ್ ಪಡ್ಲಿಂಗ್) ಕ್ಷಣವೂ ಫೋಟೋ ತೆಗೆಯಲು ಸಿಕ್ಕುವ ಅಪರೂಪದ ಅವಕಾಶ. ಇನ್ನು ಮಿಲನ ಕ್ರಿಯೆಯಲ್ಲಿ ತೊಡಗಿದ ಚಿಟ್ಟೆಗಳು ಘಂಟೆಗಳ ಕಾಲ ನಿಶ್ಚಲವಾಗಿ ಕುಳಿತಿರುವುದು ಛಾಯಾಗ್ರಾಹಕರಿಗೆ ವರದಾನವೇ ಸರಿ.

ಉತ್ತಮ ದರ್ಜೆಯ ಹೆಚ್ಚು ಪಿಕ್ಸೆಲ್‌ಗಳಿರುವ ಎಸ್‌ಎಲ್‌ಆರ್ ಕ್ಯಾಮೆರಾ ಇದ್ದರೆ ಒಳ್ಳೆಯದು. ಜೊತೆಗೊಂದು ಕನಿಷ್ಟ 90ಎಂಎಂ ಮ್ಯಾಕ್ರೊ ಲೆನ್ಸ್ ಬೇಕು. ಹಿನ್ನೆಲೆಯನ್ನು ಬ್ಲರ್ ಮಾಡಿ ಚಿಟ್ಟೆಯನ್ನು ಎದ್ದು ಕಾಣುವಂತೆ ತೋರಿಸುವಲ್ಲಿ ಮ್ಯಾಕ್ರೊ ಲೆನ್ಸ್‌ಗಳು ಮಾಡುವ ಜಾದೂ ಅದ್ಭುತ! ಲಕ್ಷಗಟ್ಟಲೆ ಹಣ ಹೂಡಲು ಸಾಧ್ಯವಿಲ್ಲದಿದ್ದರೆ ಇದ್ದ ಲೆನ್ಸಿಗೆ ಮ್ಯಾಕ್ರೊ ಫಿಲ್ಟರ್ ತೊಡಿಸಬಹುದು.

ಚಿಟ್ಟೆ ನೆರಳಲ್ಲಿ ಇದ್ದರೆ, ಬೆಳಕಿನ ಲಭ್ಯತೆ ತೀರಾ ಕಡಿಮೆ ಇದ್ದರೆ ಅಪರ್ಚರ್, ಸ್ಪೀಡ್ ಮತ್ತು ಐಎಸ್‌ಓ ಹೊಂದಿಸಿಕೊಳ್ಳಬಹುದು. ಬೇಕಾದಲ್ಲಿ ಒಂದು ಶಕ್ತಿಶಾಲಿ ಎಕ್ಸ್‌ಟರ್ನಲ್ ಫ್ಲಾಷ್ ಹಾಕಬಹುದು. ಆದರೆ ಅದಕ್ಕೆ ಡಿಫ್ಯೂಸರ್ ಬಳಸಬೇಕಾಗುತ್ತದೆ. ಇಲ್ಲವಾದರೆ ಫ್ಲಾಶ್‌ನ ಅತೀ ಬೆಳಕಿನಲ್ಲಿ ಚಿಟ್ಟೆಯಲ್ಲಿರುವ ಸೌಂದರ್ಯದ ಕುಸುರಿಯ ವಿವರಗಳು ಮಸುಕಾಗುತ್ತದೆ.





ಕಾಮನ್ ಪಿರೆಟ್

ಟಾನಿ ಕೋಸ್ಟರ್

